109
5

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ

**ಸಿ.ಸಿ.ನಂ. 268/2016**

ಫಿರ್ಯಾದಿ: ಕರ್ನಾಟಕ ಸರ್ಕಾರ

ವಿರುದ್ಧ

ಆರೋಪಿತರು: ಸಿ.ಪಿ.ಸಿ. 1521 ಸುಧೀರ ಎಸ್.ನಾಯ್ಕ
ಸಾ: ಹಳಿಯಾಳ ಪೊಲೀಸ್ ಠಾಣೆ,
ಹಳಿಯಾಳ.

## ದೋಷಾರೋಪಣೆ

ನಾನು, ಶ್ರೀ ಬಸವರಾಜ ಜಿ. ಸನದಿ, ಬಿ.ಎ., ಎಲ್‌ಎಲ್.ಬಿ., ಪ್ರ.ದ.ನ್ಯಾ.ದಂ., ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ಆರೋಪಿಯೊದ ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪೊಲೀಸ್ ಶೀರ್ಷಿಕೆಯಡಿಯಲ್ಲಿ ಖಜಾನೆಯಿಂದ ಸಹಿಯನ್ನು ಪಡೆದು ಬ್ಯಾಂಕಿಗೆ ಜಮಾ ಮಾಡುವುದು ಇದಕ್ಕೆ ಸಂಬಂಧಿಸಿದ ರಜಿಸ್ಟರಿನ ನಿರ್ವಹಣೆ ನಗದು ಪುಸ್ತಕ ನಿರ್ವಹಣೆ ಜವಾಬ್ದಾರಿಯುತ ಲೋಕಯುಕ್ತ ನೌಕರನಾಗಿ ದಿ: 30-03-2012 ರಿಂದ 16-052013 ರವರೆಗೆ ಕೇವಲ 2,700-00 ಗಳನ್ನು ಮಾತ್ರ ತುಂಬಿ ಪಿರ್ಯಾದಿಗೆ ವಂಚಿಸುವ ಉದ್ದೇಶಕ್ಕಾಗಿ ಉಳಿದ ಹಣ 27,400 ರೂ ಗಳನ್ನು ಬ್ಯಾಂಕಿಗೆ ಜಮಾ ಮಾಡಿದಂತೆ ಸೃಷ್ಟಿಸಿ 27,400-00 ರೂ. ಗಳನ್ನು ತನ್ನ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಈ ಮೂಲಕ ನೀವು ಭಾ.ದಂ.ಸಂ. ಕಲಂ 409 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಎರಡನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪಿರ್ಯಾದಿಗೆ ವಂಚಿಸುವ ಉದ್ದೇಶಕ್ಕಾಗಿ ಉಳಿದ ಹಣಗಳನ್ನು 27,400-00 ರೂ. ಗಳನ್ನು ಸಹ ಬ್ಯಾಂಕಿಗೆ ಜಮಾ ಮಾಡಿದಂತೆ ಸುಳ್ಳು ಸೃಷ್ಟನೆ ದಾಖಲೆಗಳನ್ನು ನೀಡಿ ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ 465 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ?

ಮೂರನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಬ್ಯಾಂಕಿಗೆ ವಂಚಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದು ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ 468 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ?

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸುಳ್ಳು ಸೃಷ್ಟಿಸಿದಂತಹ ನಕಲಿ ಬ್ಯಾಂಕ್ ಚಲನ ಪ್ರತಿಗಳನ್ನು ನಾಶಪಡಿಸಿ ಆದ್ದರಿಂದ ಈ ಮೂಲಕ ಭಾ. ದಂ. ಸಂಹಿತೆ ಕಲಂ 201 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಐದನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ದಾಖಲಾತಿಗಳು ಸುಳ್ಳು ಅಂತಾ ಗೊತ್ತಿದ್ದು ಸಹ ಅವುಗಳು ಮೂಲ ದಾಖಲಾತಿಗಳು ಎಂದು ನಂಬಿಸಿ ದುರ್ಬಳಕೆ ಮಾಡಿದಂತ ಹಣ 27,400-00 ರೂ. ಗಳನ್ನು ತಾನೇ ಖುದ್ದಾಗಿ ಎಸ್.ಬಿ.ಐ. ಬ್ಯಾಂಕ್ ಹಳಿಯಾಳದಲ್ಲಿ ದಿಃ 15-07-2013 ರಂದು ಪೊಲೀಸ್ ಶಿರ್ಷಿಕೆಯಡಿಯಲ್ಲಿ ಜಮಾ ಮಾಡಿದ ಅಪರಾಧ ಈ ಮೂಲಕ ಭಾ. ದಂ. ಸಂಹಿತೆ ಕಲಂ 471 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಆರನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ನೀವು ಹಳಿಯಾಳ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ನಕಲಿ ಬ್ಯಾಂಕ್ ಚಲನ ಪ್ರತಿಗಳನ್ನು ನಾಶಪಡಿಸಿ ನೀವು ದಂಡ ವಸೂಲಿ ಹಣವನ್ನು ಪೂರ್ತಿಯಾಗಿ ತುಂಬಿರುವುದಿಲ್ಲ ಆದ್ದರಿಂದ ಈ ಮೂಲಕ ಭಾ. ದಂ. ಸಂಹಿತ ಕಲಂ 406 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

11/4/18

ಹಳಿಯಾಳ.

ದಿಃ 11-04-2018.

ಪ್ರ.ದ.ನ್ಯಾ.ದಂ.ಹಳಿಯಾಳ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

ಸಿ.ಸಿ. ನಂ.: 268/16

ಪಿರ್ಯಾದಿದಾರ : ಕರ್ನಾಟಕ ಸರ್ಕಾರ

ವಿರುದ್ಧ

ಆರೋಪಿ ಹೆಸರು : ಕೆ. ಎ. ಪಿ. 1521 ಸಾರಿಗೆ ಬಸ್ ನಾಯ

ತಂದೆ/ಗಂಡನ ಹೆಸರು :

ವಯಸ್ಸು : ವರ್ಷ

ಉದ್ಯೋಗ :

ವಾಸಸ್ಥಳ : ಹಳಿಯಾಳ

### ದಂಡ ಪ್ರಕ್ರಿಯಾ ಸಂಹಿತೆ ಕಲಂ 211 ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕ ?

ಉತ್ತರ : ಇಲ್ಲ ಒಪ್ಪಿಕೊಳ್ಳುವುದಿಲ್ಲ

(ಆರೋಪಿತರ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ).

11/4/18

ಹಳಿಯಾಳ.

ದಿನಾಂಕ: 11-4-2018

ಪ್ರ.ದ.ನ್ಯಾ.ದಂ., ಹಳಿಯಾಳ.